[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 2090/2022

..................................................Vs....................................

ಪಿ.ಡಬ್ಲ್ಯು ಃ 7 ಸಿ.ಡಬ್ಲ್ಯು ಃ 11

ಸಾಕ್ಷಿದಾರನ ಹೆಸರು ಃ ವಿಶ್ವನಾಥ ನಾಯಕ್

ತಂದೆಯ ಹೆಸರು ಃ ಎನ್ ಮೋನಪ್ಪ ನಾಯಕ್

ಪ್ರಾಯ ಃ 60 ವರ್ಷ

ಉದ್ಯೋಗ ಃ ನಿವೃತ್ತ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ

ವಾಸ ಃ ಬಂಟ್ವಾಳ

ದಿನಾಂಕ 03.05.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಸಪ್ಟೆಂಬರ್ 2012 ರಿಂದ 20.08.2022 ರವರೆಗೆ ಉಡುಪಿಯ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕನಾಗಿ ಆಗಿ ಕರ್ತವ್ಯ ನಿರ್ವಹಿಸಿದ್ದೆ.

2. ದಿಃ 05.08.2022 ರಂದು ಹೆಬ್ರಿ ಆರಕ್ಷಕ ಠಾಣೆಯ ಪೊಲೀಸ್ ಉಪನೀರಿಕ್ಷಕರ ಕೋರಿಕೆಯ ಮೇರೆಗೆ ದಿಃ13.08.2022 ರಂದು ಪೂರ್ವಾಹ್ನ 11.00 ಗಂಟೆಗೆ ಹೆಬ್ರಿ ಆರಕ್ಷಕರ ಠಾಣೆಯ ಅವರಣದಲ್ಲಿ ಇದ್ದ ವಾಹನ ಸಂ. ಕೆಎ-20-ಝಡ್ -6798 ಲಘು ಮೋಟಾರು ವಾಹನವಾಗಿದ್ದು, ವಾಹನದ ವಿವರಗಳು ಮತ್ತು ಜಖಂಗಳು ಈ ಕೆಳಕಂಡಂತೆ ಇವೆ.

ವಾಹನವು ಸಿಲ್ವರ್ ಬಣ್ಣದ ಮಾರುತಿ ರಿಡ್ಜ್ ತಯಾರಿಯ ಮೋಟಾರು ಕಾರು ಆಗಿರುತ್ತದೆ. ವಾಹನದ ಚಾಸಿಸ್ ಸಂ. MA3FDEB1S00471173 ಅಗಿದ್ದು, ವಾಹನದ ಎಡಬದಿಯ ಹೆಡ್ ಲೈಟ್ ಯೂನಿಟ್, ಮುಂಭಾಗದ ಎಡಬದಿಯ ಇಂಡಿಕೇಟರ್, ಎಡಬದಿಯ ಮುಂಭಾಗದ ಫೆಂಡರ್, ಎಡಬದಿಯ ಮುಂಭಾಗದ ಬಾಗಿಲು, ಮುಂಭಾಗದ ಬಂಪರ್ , ಬಾನೆಟ್, ರೆಡಿಯೆಟರ್ ಜಖಂಗೊಂಡಿವೆ ಮತ್ತು ಎಡಬದಿಯ ಹಿನ್ನೋಟ ಕನ್ನಡಿ ಅಳವಡಿಕೆಯಲ್ಲಿ ತುಂಡಾಗಿರುತ್ತದೆ.

ಉಳಿದಂತೆ ವಾಹನದ ಎಲ್ಲಾ ಭಾಗಗಳು ಮತ್ತು ಸಿಸ್ಟಮ್ ಗಳು ಸುಸ್ಥಿತಿಯಲ್ಲಿತ್ತು. ಈ ಬಗ್ಗೆ ವರದಿ ತಯಾರಿಸಿ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿಯು ನಾನು ನೀಡಿದ ವರದಿಯಾಗಿದ್ದು ಅದರಲ್ಲಿರುವ ಸಹಿ ನನ್ನದು. ಸದ್ರಿ ವರದಿಯನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಕೆ ವಕೀಲರಿಂದಃ

ದಿಃ10.08.2022 ರಂದು ನಮ್ಮ ಕಚೇರಿಯಿಂದ ನನಗೆ ಸದ್ರಿ ವಾಹನವನ್ನು ಪರಿಶೀಲನೆ ಮಾಡಿ ವರದಿಯನ್ನು ನೀಡುವಂತೆ ಕೋರಿ ಮನವಿಯನ್ನು ನೀಡಿದ್ದು ಅದನ್ನು ನಾನು ಪಡೆದುಕೊಂಡಿರುತ್ತೇನೆ. ಪೊಲೀಸರು ಸದ್ರಿ ನಿಪಿ-18 ರಲ್ಲಿ ನಮೂದು ಮಾಡಿರುವ ವಾಹನ ಯಾವಾಗ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವಾಹನದ ಜಖಂಗಳ ಪ್ರಾಯವನ್ನು ನಮೂದು ಮಾಡಿರುವುದಿಲ್ಲ. ವಾಹನದಲ್ಲಿ ದನದ ಸಗಣಿ ಹಾಗೂ ಅದರ ಮೂತ್ರ ಇರುವ ಬಗ್ಗೆ ನಾನು ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ.

ನಾನು ಪಂಚರ ಸಮಕ್ಷಮದಲ್ಲಿ ವಾಹನವನ್ನು ತಪಾಸಣೆ ಮಾಡಿರುವುದಿಲ್ಲ. ವಾಹನದ ತಪಾಸಣಾ ವರದಿಯನ್ನು ನಾನು ಪೊಲೀಸರಿಗೆ ಯಾವಾಗ ಕೊಟ್ಟಿರುತ್ತೇನೆ ಎಂದು ನೆನಪಿಲ್ಲ.

ನಾನು ಹೆಬ್ರಿ ಠಾಣಾ ಆವರಣಕ್ಕೆ ಹೋಗಿರುವುದಿಲ್ಲ, ನಿಪಿ-18 ರಂತೆ ವರದಿಯನ್ನು ನನ್ನ ಕಚೇರಿಯಲ್ಲಿ ಕುಳಿತು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ